

# ರಂಜಿತ್ ಕಮ್ಮಟದಲ್ಲಿ ಅರಳಿದ ದುಶರಾ

‘ಜೋರಾಗಿ ಕಿರುಚಿದ್ದಕ್ಕೆ ನಾನು ಸಾರ್‌ಪಟ್ಟ ಪರಂಪರೈ ಸಿನಿಮಾಗೆ ಆಯ್ಕೆಯಾದೆ’ – ದುಶರಾ ವಿಜಯನ್ ಹೀಗೆ ಹೇಳಿ ಕೆಲವು ವರ್ಷಗಳಾಗಿವೆ. ‘ಸಾರ್‌ಪಟ್ಟ ಪರಂಪರೈ’ ತಮಿಳು ಸಿನಿಮಾ ತೆರೆಕಂಡ ಮೇಲೆ ಅವರ ಅಭಿನಯ ಪ್ರತಿಭೆ ಅನಾವರಣಗೊಂಡಿದ್ದು. ಮಾರಿಯಮ್ಮನ ಪಾತ್ರದಲ್ಲಿ ಎರಡೂ ಮೂಗಿಗೆ ಚುಚ್ಚಿಸಿಕೊಂಡ ಅವರ ಮೊಗದಲ್ಲಿ ಎಳ್ಳಷ್ಟೂ ನಗರ ನಾಗರಿಕತೆಯ ಛಾಯೆ ಆ ಸಿನಿಮಾದಲ್ಲಿ ಕಂಡಿರಲಿಲ್ಲ. ಅದಾದ ಮೇಲೆ ‘ನಚ್ಚತ್ತಿರಮ್ ನಗರ್‌ಗಿರದು’ ಸಿನಿಮಾದಲ್ಲಿ ಅವರು ನಗರ ನಾಗರಿಕತೆಯ ಹೆಣ್ಣುಮಗಳಾಗಿ ಕಾಣಿಸಿಕೊಂಡರು. ಅದರಲ್ಲಿ ಅವರದ್ದು ಇನ್ನೂ ಬೋಲ್ಡ್ ಪಾತ್ರ. ಗೆಟಪ್ ಕೂಡ ಸಂಪೂರ್ಣ ಬದಲು. ಹಾಗೇ ಇದ್ದದ್ದು ದಲಿತ ಸಂವೇದನೆ.

ನಿರ್ದೇಶಕ ಪಾ. ರಂಜಿತ್ ತಮ್ಮ ‘ಸಾರ್‌ಪಟ್ಟ ಪರಂಪರೈ’ ಸಿನಿಮಾಗೆಂದು ನಟಿಯ ತಲಾಷು ನಡೆಸಿದ್ದರು. ಆಗ ಈ ಹುಡುಗಿಯೂ ಸ್ಕ್ರೀನ್ ಟೆಸ್ಟ್‌ಗೆ ಬಂದರು. ಒಂದು ದೃಶ್ಯವನ್ನು ವಿವರಿಸಿ, ಕಣ್ಣೇ ಇಕ್ಕದಂತೆ ಜೋರಾಗಿ ಮೊದಲು ಕೂಗುವಂತೆ ರಂಜಿತ್ ಹೇಳಿದರು. ಎಷ್ಟು ಜೋರಾಗಿ ಎಂದರೆ, ತನ್ನ ಗಂಟಲು ಇನ್ನೇನು ಹರಿಯುತ್ತದೆ ಎನ್ನುವಷ್ಟು ಎಂಬ ಷರತ್ತೂ ಇತ್ತು. ದುಶರಾ ಕಿರುಚಿದ ಪರಿ ಕಂಡೊಡನೆ ರಂಜಿತ್ ಅವರೇ ಸಿನಿಮಾದ ನಾಯಕಿ ಎಂದ ಕ್ಷಣವಿನ್ನೂ ಈ ನಟಿಗೆ ನೆನಪಿದೆ.

ಪಾಂಡಿಚೆರಿ ಮೂಲದ ಇಂಡಿಯಾನೋಸ್ತ್ರಂ ಎಂಬ ರಂಗತಂಡದವರಿಂದ ಪಾ. ರಂಜಿತ್ ಚಿತ್ರೀಕರಣಕ್ಕೆ ಮೊದಲು ನಟ–ನಟಿಯರನ್ನು ತಾಲೀಮಿಗೆ ಒಳಪಡಿಸುವುದು ರೂಢಿ. ಆರ್ಯ ಜತೆಗೆ ‘ಸಾರ್‌ಪಟ್ಟ ಪರಂಪರೈ’ನಲ್ಲಿ ನಟಿಸಿದಾಗಲೂ ದುಶರಾ ಅಲ್ಲಿ ಸಾಕಷ್ಟು ಕಲಿತುಕೊಂಡರು. ಉತ್ತರ ಮದ್ರಾಸ್‌ನ ಹಳೆಕಾಲದ ಉಚ್ಚಾರ ಸೇರಿದಂತೆ ಅನೇಕ ಸೂಕ್ಷ್ಮ ಸಂಗತಿಗಳನ್ನು ಅರಿತದ್ದು ಅಲ್ಲಿಯೇ. ಅದಾದ ಮೇಲೆ ‘ನಚ್ಚತ್ತಿರಮ್ ನಗರ್‌ಗಿರದು’ ಸಿನಿಮಾಗೂ ಮೊದಲು ಇಂಥದ್ದೇ ತಾಲೀಮು ನಡೆಯಿತು. ‘ಪ್ರೇಮ’ದ ವಸ್ತುವನ್ನು ಸಮಕಾಲೀನ ರಾಜಕೀಯ, ಜಾತಿಪ್ರಜ್ಞೆಗಳ ಜತೆಗೆ ಬೆಸೆದ ಸಂಕೀರ್ಣ ಕಥೆ ಇದ್ದಿದ್ದರಿಂದ ರೆನೆ ಎಂಬ ಕೇಂದ್ರಪಾತ್ರಕ್ಕೆ ಹೆಚ್ಚೇ ಸಿದ್ಧರಾಗಬೇಕಾಯಿತು.

ಈ ಸಿನಿಮಾದಲ್ಲಿ ಅಭಿನಯಿಸಿದ ಮೇಲೆ ಸಾಮಾಜಿಕವಾದ ಬಹುಮುಖ್ಯ ಸಂಗತಿಗಳ ಜತೆಗೆ ಪ್ರೀತಿಯ ಸೂಕ್ಷ್ಮಗಳೆಲ್ಲ ತಿಳಿಯಿತು ಎನ್ನುವ ದುಶರಾ, ನಟಿಯಾಗಲೆಂದೇ ಆರು ವರ್ಷ ಸೈಕಲ್ ಹೊಡೆದವರು. ಆಮೇಲೆ ಎರಡು ಸಿನಿಮಾಗಳಲ್ಲಿ ಹಾಗೂ ಒಂದು ಕಿರುಚಿತ್ರದಲ್ಲಿ ಅವಕಾಶ ಸಿಕ್ಕಮೇಲೆ ಅವರ ಚಹರೆ ಹಾಗೂ ನಟನೆಯ ಕಲಿಕೆಗೆ ಒಂದು ಚೌಕಟ್ಟು ಸಿಕ್ಕಿದ್ದು.

‘ಪಾ. ರಂಜಿತ್ ಸಿನಿಮಾಗಳಲ್ಲಿನ ಸ್ತ್ರೀ ಪಾತ್ರ ಬಹಳ ಗಟ್ಟಿತನದಿಂದ ಕೂಡಿರುತ್ತದೆ. ಅವರು ಪಾತ್ರದ ಗ್ರಾಫ್ ಮೂಡಿಸುವ ಮೊದಲೇ ಅನೇಕ ಸ್ತರಗಳಲ್ಲಿ ಯೋಚಿಸಿರುತ್ತಾರೆ. ಇಂತಹ ನಿರ್ದೇಶಕರ ಕೈಗೆ ಸಿಕ್ಕರೆ ನಾವೂ ಅಭಿನಯ ಕಲೆಯಲ್ಲಿ ಬೆಳೆಯಲು ಸಾಧ್ಯ’ ಎನ್ನುವುದು ದುಶರಾ ಅನುಭವದ ಮಾತು.

ಪಾರ್ವತಿ ತಿರುವೊಟ್ಟು, ನಯನತಾರಾ, ಐಶ್ವರ್ಯಾ ರಾಜೇಶ್ ತರಹದ ನಟಿ ತಾನಾಗಬೇಕು ಎಂಬ ಮಹತ್ವಾಕಾಂಕ್ಷೆ ಇಟ್ಟುಕೊಂಡಿರುವ ದುಶರಾ, ಸದ್ಯಕ್ಕೆ ಬಾಲಾಜಿ ಮೋಹನ್ ಹಾಗೂ ಗೌತಮ್ ರಾಜ್ ಸಿನಿಮಾಗಳಲ್ಲಿ ಅಭಿನಯಿಸಲು ಒಪ್ಪಿಕೊಂಡಿದ್ದಾರೆ. ■

# ವರುಣ್ ಜ್ಞಾಪಕ ಶಾಲೆ

■ ವಿಶಾಖ ಎನ್.

ವರುಣ್ ಧವನ್ ಹಿಂದಿ ಚಲನಚಿತ್ರಗಳಲ್ಲಿ ಅಭಿನಯಿಸಲು ಆರಂಭಿಸಿ ಹತ್ತು ವರ್ಷಗಳು ಉರುಳಿವೆ. ‘ಸ್ಟೂಡೆಂಟ್ ಆಫ್ ದಿ ಇಯರ್’ ಸಿನಿಮಾ ಮೂಲಕ ಅವರನ್ನು ತೆರೆಗೆ ಪರಿಚಯಿಸಿದವರು ಕರಣ್ ಜೋಹರ್. ಆಲಿಯಾ ಭಟ್ ಕೂಡ ಅದೇ ಸಿನಿಮಾದಿಂದ ಪ್ರವರ್ಧಮಾನಕ್ಕೆ ಬಂದವರು. ವರುಣ್ ಅವರಿಗಿಂತ ಆಲಿಯಾ ನಟನೆಯಲ್ಲಿ ಹೆಚ್ಚೇ ಬೆಳೆದಿದ್ದಾರೆ ಎನ್ನಲು ಸಾಕಷ್ಟು ಉದಾಹರಣೆಗಳು ಸಿಗುತ್ತಿವೆ. ವರುಣ್ ಕೂಡ ಖಾಲಿ ಕುಳಿತಿಲ್ಲ ಎನ್ನುವುದು ಸಮಾಧಾನ. ಹತ್ತು ವರ್ಷದ ಸಂಭ್ರಮಾಚರಣೆಯ ಸಂದರ್ಭದಲ್ಲಿಯೇ ಅವರ ‘ಭೇಡಿಯಾ’ ಹಿಂದಿ ಸಿನಿಮಾದ ಟ್ರೈಲರ್ ಬಿಡುಗಡೆಗೊಂಡಿತು.

ಈ ಹೆಮ್ಮೆಯ ಕ್ಷಣದಲ್ಲಿದ್ದಾಗ ಅವರು ತಮ್ಮ ಮೊದಲ ಸಿನಿಮಾ ತೆರೆಕಂಡ ಹಿಂದಿನ ದಿನವನ್ನು ನೆನಪಿಸಿಕೊಂಡರು.

‘ಸ್ಟೂಡೆಂಟ್ ಆಫ್ ದಿ ಇಯರ್ ಸಿನಿಮಾ ಬಿಡುಗಡೆಯ ಹಿಂದಿನ ದಿನ ನಾನು ನಿದ್ದೆ ಮಾಡಲಿಲ್ಲ. ಹೊಟ್ಟೆಯಲ್ಲಿ ಚಿಟ್ಟೆಗಳು ಓಡಾಡುತ್ತಿದ್ದಂತೆ ಭಾಸವಾಗಿತ್ತು. ಬೆಳಿಗ್ಗೆ ಅಪ್ಪ ಬೇಗ ಎದ್ದವರೇ ದೇವರ ಮುಂದೆ ನಿಂತರು. ನಾನೂ ಅವರ ಜತೆಗೆ ಕೈಮುಗಿದು ನಿಂತು, ಒಳ್ಳೆಯದು ಮಾಡಪ್ಪ ಎಂದು ಪ್ರಾರ್ಥಿಸಿದೆ. ಆಮೇಲೆ ಏನೇನೆಲ್ಲ ಆಯಿತೆನ್ನುವುದು ಪ್ರೇಕ್ಷಕರಿಗೆ ಗೊತ್ತಿದೆ’ ಎಂದು ವರುಣ್ ನಟನಾದ ಸಂದರ್ಭವನ್ನು ಮೆಲುಕು ಹಾಕಿದರು.

ಅಮರ್ ಕೌಶಿಕ್ ನಿರ್ದೇಶನದ ‘ಭೇಡಿಯಾ’ ಹಿಂದಿ ಅಲ್ಲದೆ ತೆಲುಗು, ತಮಿಳು ಭಾಷೆಗಳಲ್ಲಿಯೂ ತೆರೆಕಾಣಲಿದೆ. ■

